ಮಹಿಳಾ ತಂತ್ರಜ್ಞರನ್ನು ಪ್ರೋತ್ಸಾಹಿಸಿ ಬೆನ್ನು ತಟ್ಟುವ ಹಿರಿಯರು ಕಡಿಮೆ. ಅದೇ ಕೇರಳ, ತಮಿಳುನಾಡಿನ ಉದ್ಯಮದಲ್ಲಿ ಮಹಿಳೆಯರನ್ನು ಹುರಿದುಂಬಿಸುವ ಪ್ರವೃತ್ತಿ ಇದೆ. ಅಲ್ಲೂ ಸಮಸ್ಯೆಗಳು ಇಲ್ಲವೆಂದಲ್ಲ. ಆದರೆ ಪ್ರೋತ್ಸಾಹ ಹೆಚ್ಚಿನ ಮಟ್ಟದಲ್ಲಿದೆ. ನನ್ನ ಎರಡು ಚಿತ್ರಗಳು ದೊಡ್ಡ ಮಟ್ಟದಲ್ಲಿ ಹಿಟ್ ಆದವು. 'ನೀರ್‌ದೋಸೆ'ಯ ವಿಜಯಪ್ರಸಾದ್ ಮತ್ತು ಕೆಲವು ತಂತ್ರಜ್ಞರು ಅಭಿನಂದಿಸಿದ್ದು ಬಿಟ್ಟರೆ ಉದ್ಯಮದ ದೊಡ್ಡವರು ಯಾರೂ ಒಂದು ಬುಕೇ ತಂದುಕೊಟ್ಟದ್ದಿಲ್ಲ. ಸಾಮಾಜಿಕ ಜಾಲತಾಣದಲ್ಲೂ ಶುಭ ಹಾರೈಸಲಿಲ್ಲ. ಒಂದು ಸಿನಿಮಾಕ್ಕೆ ಥಿಯೇಟರ್ ಪ್ರಾಬ್ಲಂ ಬಂದಾಗಲೂ ಉದ್ಯಮದ ದೊಡ್ಡವರು ಯಾರೂ ನೆರವಿಗೆ ಬರಲಿಲ್ಲ' ಎಂದದ್ದು ಸುಮನಾ ಕಿತ್ತೂರು.

'ನಿರ್ದೇಶಕರ ಸಂಘದಲ್ಲಿ ನಾನೂ ದುಡ್ಡು ಕಟ್ಟಿ ಸದಸ್ಯೆ ಆಗಿದ್ದೇನೆ ಅಷ್ಟೆ, ಬೇರೇನೂ ಗೊತ್ತಿಲ್ಲ. ಯಾವುದಕ್ಕೂ ಕರೆ ಬಂದಿಲ್ಲ. ನಮ್ಮಂತಹ ಮಹಿಳೆಯರನ್ನು ನೀವು ಪತ್ರಿಕೆಯವರು ಕರೆಸಿ ಮಾತನಾಡಿಸುವುದಷ್ಟೇ ನಡೆದಿದೆ. ಸುಧಾ, ಪ್ರಜಾವಾಣಿಯವರು ಎರಡೆರಡು ಸಲ ಮಹಿಳಾ ನಿರ್ದೇಶಕಿಯರನ್ನು ಕರೆಸಿ ಚರ್ಚೆ ಏರ್ಪಡಿಸಿದ್ದರು. ಉಳಿದಂತೆ ಮಹಿಳಾ ದಿನಾಚರಣೆ ಬಂದಾಗ ಕೆಲವರಿಗೆ ನಾವು ನೆನಪಾಗ್ತೀವಿ' ಎನ್ನುತ್ತಾರೆ ಸುಮನಾ.

ಉದ್ಯಮದ ವೃತ್ತಿಪರ ಸಂಸ್ಥೆಗಳ ಬಗ್ಗೆ ಕವಿತಾ ಲಂಕೇಶ್ ಅವರದ್ದೂ ಇದೇ ನುಡಿ. 'ನಾವು ಇರೋರೇ ನಾಲ್ಕೈದು ಜನ. ಒಬ್ಬೊಬ್ಬರೂ ಹಿಂದಿನಿಂದ ಬೈದುಕೊಂಡು ಓಡಾಡ್ತಿದ್ದೇವೆ. ನಾನಂತೂ ಫಿಲಂ ಚೇಂಬರ್ ಕಡೆಗೆ ಹೋಗುವುದು ಕಡಿಮೆ. ನಮ್ಮಲ್ಲಿ ಒಗ್ಗಟ್ಟಿಲ್ಲ ಎನ್ನುವುದು ನಿಜ. ನಿರ್ದೇಶಕರ ಸಂಘ ಏನು ಕೆಲಸ ಮಾಡ್ತಿದೆಯೋ ನನಗೆ ಗೊತ್ತಿಲ್ಲ' ಎನ್ನುತ್ತಾರೆ ಕವಿತಾ. 'ಒಂದೇ ಸಿನಿಮಾ ಮಾಡಿ ನಿರ್ದೇಶಕಿಯರು ಕಣ್ಮರೆ ಆಗುವುದೂ ಅದಕ್ಕೆ ಒಂದು ಕಾರಣ. ಇಲ್ಲೇ ಕಚ್ಚಿಕೊಂಡು ಕೆಲಸ ಮಾಡಬೇಕು ಎನ್ನುವ ಧೋರಣೆ ಇದ್ದರೆ ಜಯ ಸಾಧ್ಯ' ಎನ್ನುವುದು ಅವರ ನಂಬಿಕೆ.

ಈ ವಿಷಯದಲ್ಲಿ ರೂಪಾ ಅಯ್ಯರ್ ಅವರದ್ದು ವಿಭಿನ್ನ ಅನುಭವ. 'ಮಹಿಳೆಯರು ನಿರ್ದೇಶನಕ್ಕೆ ಇಳಿದರೆ ಇತರ ತಂತ್ರಜ್ಞರು ಅಸಡ್ಡೆ ತೋರಿಸುವುದು ನಿಜ. ಹೆಣ್ಣುಮಕ್ಕಳ ಶೋಷಣೆ ನಡೆಯುವುದೂ ನಿಜ. ಫಿಲಂ ಚೇಂಬರ್‌ನಲ್ಲಿ ಪ್ರತ್ಯೇಕ ಮಹಿಳಾ ವಿಂಗ್ ಬೇಕು ಅಂತ ನಾನೂ ಹಿಂದೆ ಬಹಳ ಸಲ ಉದ್ಯಮದ ಹಿರಿಯರ ಬಳಿ ಕೇಳಿಕೊಂಡಿದ್ದೇನೆ. ನೀವೇ ಮುಂದೆ ಬರೋದಿಲ್ಲ ಎಂದು ಹಿರಿಯರು ಹೇಳ್ತಾರೆ. ಅದೂ ನಿಜ. ಚೇಂಬರ್‌ನಲ್ಲಿ ಪ್ರತಿಭಟನೆ ನಡೆದಾಗ ನಾನೊಬ್ಬಳೇ ಎಷ್ಟೋ ಸಲ ಕಾಣಿಸಿಕೊಂಡಿದ್ದೇನೆ. ಹಾಗೆಂದು ಅದು ನಿರ್ದೇಶಕಿಯರ ತಪ್ಪು ಎನ್ನಲಾರೆ. ಅದು ಅವರ ವೈಯಕ್ತಿಕ ವಿಚಾರ. ಚೇಂಬರ್‌ನಲ್ಲಿ ಎಲ್ಲ ನಿರ್ದೇಶಕರೂ ಸೇರುತ್ತಾರಾ? ನಿರ್ದೇಶಕಿಯರಿಗೆ ಅವರದ್ದೇ ಆದ ಬೇರೆ ಕೆಲಸಗಳಿರುತ್ತವೆ. ಫ್ರೆಂಡ್‌ಷಿಪ್‌ನಲ್ಲಿ ಒಟ್ಟಿಗೆ ಸೇರಿ ಎಲ್ಲರೂ ಮಾತನಾಡುವುದಿದೆ. ಪತ್ರಿಕೆಯವರು, ಟಿವಿ ಯವರು ಕರೆಸಿದಾಗ ಎಲ್ಲರೂ ಒಟ್ಟು ಸೇರಿದ್ದಿದೆ' ಎನ್ನುತ್ತಾರೆ ರೂಪಾ.

ಹೊಸ ತಲೆಮಾರಿನ ಚಿತ್ರ ನಿರ್ದೇಶಕಿ ರಿಶಿಕಾ ಶರ್ಮಾ ಅವರು ಈ ನಿಟ್ಟಿನಲ್ಲಿ ಆಶಾವಾದಿ ಎನ್ನಬಹುದು. 'ಟ್ರಂಕ್;




ನಿರ್ದೇಶಕಿ ರಿಶಿಕಾ ಶರ್ಮಾ (ಎಡಚಿತ್ರ)



'ಟ್ರಂಕ್' ಚಿತ್ರದ ದೃಶ್ಯ